'ಯೆಸ್ ಗುಪ್ತಾ ಟೆಲ್ಮಿ, ಎನಿಥಿಂಗ್ ಅರ್ಜೆಂಟ್?'

'ಯೆಸ್ ಮೇಡಂ, ವಿಕ್ರಂ ಸರ್‌ಗೆ ಅಟ್ಯಾಕ್ ಆಗಿದೆ. ಇಲ್ಲೇ ಜಯನಗರ ನರ್ಸಿಂಗ್ ಹೋಮಿನಲ್ಲಿ ವೆಂಟಿಲೇಟರ್‌ನಲ್ಲಿಟ್ಟಿದ್ದಾರೆ.'

ಧ್ವನಿಯಲ್ಲಾಗಲೀ, ಬಹುಶಃ ಭಾವನೆಯಲ್ಲಿಯೂ ಸಹ ಯಾವ ಬದಲಾವಣೆಯಿಲ್ಲದೆ, 'ವೆಲ್... ಗುಪ್ತಾ ನಾನೊಂದು ಅರ್ಜೆಂಟ್ ಮೀಟಿಂಗಿನಲ್ಲಿದ್ದೀನಿ. ಇಫ್ಯೂ ಡೋಂಟ್‌ಮೈಂಡ್ ಸಾಯಂಕಾಲದವರೆಗೆ ವಿಕ್ರಂ ಕೇರ್ ತಗೋತಿರಿ. ನಾನು ಬೇಗ ಬಂದುಬಿಡ್ತೀನಿ'.

ಎಷ್ಟೋ ವರ್ಷಗಳಿಂದ ವಿಕ್ರಮ್ ಅವರ ಕೇರ್ ತೆಗೆದುಕೊಳ್ಳುತ್ತಿರುವ ತನಗೆ ಸಾಯಂಕಾಲದವರೆಗೆ ಅಂತ ಹೇಳುವುದು ನೋಡಿದರೆ ತಿಳಿಯುವುದಿಲ್ಲವೇ ದುಡ್ಡಿದ್ದವರ ಧಿಮಾಕು! ಮೇಲಿಂದ ಬೇಗ ಬಂದುಬಿಡುವೆನೆಂಬ ಕಾಳಜಿಯ ಲೇಪನ ಬೇರೆ!

ವಿಕ್ರಂ ಸರ್ ಅವರಂತಹ ವ್ಯಕ್ತಿಯೊಡನೆ ಬದುಕನ್ನು ಹಂಚಿಕೊಳ್ಳುವ ಭಾಗ್ಯ ಎಲ್ಲರಿಗಿರುವುದಿಲ್ಲ. ಆದರೆ ರುಕ್ಮಿಣಿ ಮೇಡಂ ಕಣ್ಣಿನಲ್ಲಿ ವಿಧಿಗೆ ಕೃತಜ್ಞತೆ ಸಲ್ಲಿಸುವ ಯಾವ ಎಳೆಯೂ ಇಲ್ಲಿವರೆಗೆ ಕಂಡಿದ್ದಿಲ್ಲ. ಒಬ್ಬ ಮನುಷ್ಯನನ್ನು ಇಷ್ಟರಮಟ್ಟಿಗೆ ಕಡೆಗಣಿಸಿದರೆ ಅವನ ಪರಿಸ್ಥಿತಿ ಹೇಗಿರಬಹುದು. ಯಾರಿಗೆ ಅಂತ ಸರ್ ಪ್ರತಿದಿನ ಮನೆ ಸೇರಬೇಕು... ಇದ್ದೊಬ್ಬ ಮಗಳನ್ನೂ ಚಿಕ್ಕಂದಿನಿಂದಲೆ ಬೋರ್ಡಿಂಗ್ ಸ್ಕೂಲ್‌ಗೆ ಓಡಿಸಿದ ಮೇಡಂ ದೇಹದಲ್ಲಿ ಹೃದಯವಂತೂ ಇರಲು ಸಾಧ್ಯವೇ ಇಲ್ಲ ಎಂದು ಮನಸ್ಸಿನಲ್ಲಿಯೇ ಗೊಣಗಿಕೊಂಡ ಗುಪ್ತಾ.

ಎಷ್ಟೋ ವರ್ಷಗಳ ಹಿಂದೊಂದು ರಾತ್ರಿ ರುಕ್ಮಿಣಿ ಮೇಡಂ ತನ್ನ ಕೈ ಹಿಡಿದು, 'ಗುಪ್ತಾ, ಐ ಕಾಂಟ್

